ದಿನಾಂಕ 09.03.2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ : ಶ್ರೀಮತಿ ಉಮಾ ಡಿ.ಜಿ.ಪಿ. ರವರಿಂದ 57 ನೇ ಎದುರುದಾರ ಪರವಾಗಿ:

1. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿದ್ದು ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿದ್ದು, ಸತ್ಯವಾಗಿದ್ದು ಪ್ರಮಾಣ ಪತ್ರದಲ್ಲಿರುವ ಸಹಿ ನನ್ನ ಸಹಿಯಾಗಿರುತ್ತದೆ.

2. 1952-53 ನೇ ಸಾಲಿನ ಭೂ ಸ್ವಾಧೀನ ಪ್ರಕ್ರಿಯೆಗೆ ಸಂಬಂಧಪಟ್ಟ ಪುಟ 1 ರಿಂದ 52 ದಾಖಲೆ ಹಾಜರು ಮಾಡಿರುತ್ತೇನೆ. ಅದನ್ನು ನಿಡಿ.79 ಅಂತ ಗುರುತಿಸಲಾಯಿತು. ಅದೇ ರೀತಿ ಸರ್ವೆ ನಂ.131/1 ವಿಸ್ತೀರ್ಣ 6.11 ಗುಂಟೆ ಜಮೀನಿಗೆ ಸಂಬಂದಪಟ್ಟ ನಕ್ಷೆ ಕಾಪಿ ಹಾಜರು ಮಾಡಿರುತ್ತೇನೆ. ಅದನ್ನು ನಿಡಿ.80 ಅಂತ ಗುರುತಿಸಲಾಯಿತು. ಅದೇ ರೀತಿ ಗ್ರಾಮ ಪಂಚಾಯಿತಿಯವರುಕೊಟ್ಟ ಡಿಮ್ಯಾಂಡ್ ರಿಜಿಸ್ಟರ್ ಕಾಪಿ ಹಾಜರು ಮಾಡಿರುತ್ತೇನೆ. ಅದನ್ನು ನಿಡಿ.81 ಅಂತ ಗುರುತಿಸಲಾಯಿತು. ಅದೇ ರೀತಿ ಶಾಲಾ ಕಟ್ಟಡ ತೋರಿಸುವ 25 ಫೋಟೋ ಇವರು ಆಲ್ಬಂ ಹಾಜರು ಮಾಡಿರುತ್ತೇನೆ. ಅದನ್ನು ನಿಡಿ.82 ಅಂತ ಗುರುತಿಸಲಾಯಿತು. ಅದೇ ರೀತಿ ಸರ್ವೆ ನಂ.131 ಇದಕ್ಕೆ ಸಂಬಂಧಿಸಿದ ಹಿಸ್ಸಾ ಟಿಪ್ಪಣಿ ಹಾಜರು ಮಾಡಿರುತ್ತೇನೆ. ಅದನ್ನು ನಿಡಿ.83 ಅಂತ ಗುರುತಿಸಲಾಯಿತು. ಸೆಟಲ್‌ಮೆಂಟ್ ಆಕಾರ್ ಬಂದ್ ಹಾಜರು ಮಾಡಿರುತ್ತೇನೆ. ಅದನ್ನು ನಿಡಿ.84 ಅಂತ ಗುರುತಿಸಲಾಯಿತು. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131/1 ಇದರ ಪಕ್ಕಾ ಪುಸ್ತಕ ಹಾಜರು ಮಾಡಿರುತ್ತೇನೆ. ಅದನ್ನು ನಿಡಿ.85 ಅಂತ ಗುರುತಿಸಲಾಯಿತು. ಅದೇ ರೀತಿ ಗ್ರಾಮ ಪಂಚಾಯಿತಿಯವರು ಕೊಟ್ಟ ನಮೂನೆ 9, 11(ಎ) ಹಾಜರು ಮಾಡಿರುತ್ತೇನೆ. ಅವುಗಳನ್ನು ನಿಡಿ.86, 87 ಅಂತ ಗುರುತಿಸಲಾಯಿತು. ಫೋಟೋಗೆ ಸಂಬಂಧಿಸಿದ ಸಿ.ಡಿ. ಗುರುತಿಸುತ್ತೇನೆ. ಅದನ್ನು ನಿಡಿ.88 ಅಂತ ಗುರುತಿಸಲಾಯಿತು.

ಆದ್ದರಿಂದ ಮಾನ್ಯ ನ್ಯಾಯಾಲಯದವರು ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131/1 ಇದಕ್ಕೆ ಸಂಬಂಧಪಟ್ಟಂತ ಪರಿಹಾರ ಹಣವನ್ನು ಶಿಕ್ಷಣ ಇಲಾಖೆಗೆ ಕೊಡಬೇಕು ಅಂತ ವಿನಂತಿಸುತ್ತೇನೆ.

ಎ.ಇಮ್ಯಾನುಯಲ್ ವಕೀಲರು ಎದುರುದಾರ 6 ರಿಂದ 8, 10 (ಎ) ರಿಂದ (ಡಿ) ವರೆಗೆ ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಅಂತ ಹೇಳಿರುತ್ತಾರೆ.

ಶ್ರೀ ಎಸ್.ಸುನೀಲ್ ಕುಮಾರ್ ವಕೀಲರು ಎದುರುದಾರ 11 ಪರವಾಗಿ ಪಾಟೀ ಸವಾಲು ಇರುವುದಿಲ್ಲ ಅಂತ ಹೇಳಿರುತ್ತಾರೆ.

ಶ್ರೀ ಜಗನ್ನಾಥ್ ವಕೀಲರು ಎದುರುದಾರ 21 ಪರವಾಗಿ ಪಾಟೀ ಸವಾಲು ಇರುವುದಿಲ್ಲ ಅಂತ ಹೇಳಿರುತ್ತಾರೆ.

ಶ್ರೀ ಕೆ.ಎಂ.ಬಸವರಾಜು ವಕೀಲರು ಎದುರುದಾರ 7 ರವರ ಪರವಾಗಿ , ಶ್ರೀ ಎ.ಕೆ ವಕೀಲರು ಎದುರುದಾರ 33 ರಿಂದ 35, ಎನ್.ಆರ್ ವಕೀಲರು ಎದುರುದಾರ 45 ಪರವಾಗಿ ಹಾಜರಿರುವುದಿಲ್ಲ. ಎದುರುದಾರ ಕೂಡ ಇರುವುದಿಲ್ಲ. ಹೀಗಾಗಿ ಸದರಿ ಎದುರುದಾರರ ಪರವಾಗಿ ಪಾಟೀ ಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯಿತು.

ಕೇವಲ ಎಂ.ಜೆ.ಜೆ ವಕೀಲರು ಎದುರುದಾರ 1 ರಿಂದ 5 ರವರ ಪರವಾಗಿ ಪಾಟೀ ಸವಾಲಿಗೆ ಸಮಯ ಕೇಳಿದ್ದಾರೆ. ಮುಂದೂಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಎಸ್.ಬಿ.ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

ದಿನಾಂಕ 17.03.2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ ಎಂ.ಜೆ.ಜೆ ವಕೀಲರಿಂದ ಎದುರುದಾರ 1 ರಿಂದ 5 ರವರ ಪರವಾಗಿ :

3. ಈ ಕೇಸಲ್ಲಿ ನ್ಯಾಯಾಲಯಕ್ಕೆ ದಾಖಲೆ ಕೊಡುವುದಕ್ಕಿಂತ ಪೂರ್ವದಲ್ಲಿ ನಾನು ಅದರಲ್ಲಿರುವ ವಿಷಯ ಓದಿ ತಿಳಿದುಕೊಂಡಿದ್ದೇನೆ. ಎದುರುದಾರ 56 ಬಿ.ಇ.ಓ ನನ್ನ ಮೇಲಾಧಿಕಾರಿ ಎನ್ನುವುದು ನಿಜ. ಅವರ ಜೊತೆಗೆ ನಾನು ಈ ಕೇಸಿನ ಬಗ್ಗೆ ಚರ್ಚೆ ಮಾಡಿದ್ದೇನೆ. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131/1 ಇದಕ್ಕೆ ಸಂಬಂದಿಸಿದ ದಾಖಲೆಗಳನ್ನು ನಾನು ಹಿರಿಯ ಅಧಿಕಾರಿಗಳಿಂದ ಪಡೆದಿದ್ದೇನೆ. ಈಗ ನ್ಯಾಯಾಲಯದ ಹೊರಗಡೆ ಒಬ್ಬ ಕೃಷ್ಣ ಅನ್ನುವವರು ಇದ್ದಾರೆ ಎನ್ನುವುದು ನಿಜ. ಸದರಿ ಕೃಷ್ಣ ಅನ್ನುವವರು ಈ ಕೇಸಲ್ಲಿ ಪಾರ್ಟಿಯಾಗಿರುವುದಿಲ್ಲ. ಸದರಿ ಕೃಷ್ಣ ಇವರು ಶಾಲೆಯ ಎಸ್.ಡಿ.ಎಂ ಸದಸ್ಯ ಆಗಿರುತ್ತಾರೆ. ಕಳೆದ ವಿಚಾರಣೆ ದಿವಸ ನನ್ನ ಜೊತೆಗೆ ಕೋರ್ಟಿಗೆ ಶಾಲೆಯ ಸದಸ್ಯರಾದ ಕೃಷ್ಣ, ಊರಿನ ಗ್ರಾಮಸ್ಥರಾದ ಮಹೇಶ ಬಂದಿದ್ದರು ಎನ್ನುವುದು ನಿಜ. ಸದರಿ ಕೃಷ್ಣ ಮತ್ತು ಮಹೇಶ ಇವರು ಮಧ್ಯಂತರ ಅರ್ಜಿ - 16 ವಿಚಾರಣೆಯಾಗಿ ತೀರ್ಮಾನ ಆಗುವವರೆಗೂ ಅವರು ಕೋರ್ಟಿಗೆ ಬಂದಿದ್ದರು ಅನ್ನುವುದು ನನಗೆ ಗೊತ್ತಿಲ್ಲ. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131/1 ಇದರ index of land ನೋಡುತ್ತಿದ್ದೇನೆ. ಅರದಲ್ಲಿ ಮೂಲತಃ 22 ಎಕರೆ 4 ಗುಂಟೆ ಇತ್ತು ಎನ್ನುವುದು ನಿಜ. ಸದರಿ index of land ಅಲ್ಲಿ ಬಲಗಡೆ ಕಲಂ 18, 20 ರಲ್ಲಿ ಚೌಡ ಬಿನ್ ಚೌಡೇಗೌಡ ಮಾಲೀಕರ ಹೆಸರು ಬರೆಯಲಾಗಿದೆ ಎನ್ನುವುದು ನಿಜ. ನಿಪಿ.79 ಕಡತದ ಇಂಕ್ ಪುಟ 47 ದಾಖಲೆ ನೋಡುತ್ತಿದ್ದೇನೆ. ಅದರಲ್ಲಿ ಶ್ರೀಮಾನ್ ಮಹಾರಾಜ ಮೈಸೂರು ಇವರು ಸರ್ಕಾರದ ಪರವಾಗಿ 6 ಎಕರೆ 11 ಗುಂಟೆಗೆ 1952 ರಲ್ಲಿ ನಡವಳಿಕೆ ಮಾಡಿದ್ದಾರೆ ಎನ್ನುವುದು ನಿಜ. ಅದರಲ್ಲಿ ಬರೆದಿರುವ ಚೆಕ್ ಬಂದಿ ಸರಿಯಿರುತ್ತದೆ.

4. ನಮ್ಮ ಶಾಲಾ ಕಾಲೇಜಿಗೆ ಜಾಗ ಬೇಕಾದರೆ , ಕಟ್ಟಡ ಬೇಕಾದರೆ, ಸೌಕರ್ಯಕ್ಕೆ ಹಣ ಬೇಕಾದರೆ ನಾವು ಬಿ.ಇ.ಓ ಮುಖಾಂತರ ಡಿ.ಡಿ.ಪಿ.ಐ , ಮಂಡ್ಯ ಇವರಿಗೆ ಕಳುಹಿಸಿ ಕೊಡುತ್ತೇವೆ. ಸದರಿ ಡಿ.ಡಿ.ಪಿ.ಐ ಇವರು ಅನುದಾನ ಕೇಳಿ ಬೆಂಗಳೂರು ಶಿಕ್ಷಣ ಇಲಾಖೆ ಕಮೀಷನರ್ ಇವರಿಗ ಕಳುಹಿಸಿ ಕೊಡುತ್ತಾರೆ. ನಮ್ಮ ಶಾಲೆಗೆ ಸಂಬಂಧಪಟ್ಟ ಯಾವುದದರೂ ಕೋರಿಕೆ ಅರ್ಜಿ ವಗೈರೆ ದಾಖಲೆಗಳು ಮಂಡ್ಯ ದಕ್ಷಿಣ ಬಿ.ಇ.ಓ ಕಚೇರಿಯಲ್ಲಿ ಸಿಗುತ್ತವೆ. ಅದೇ ರೀತಿ ನಮ್ಮ ಶಾಲೆಗೆ ಯಾರಾದರೂ ಆಸ್ತಿ ಕೊಟ್ಟರೆ, ಆ ಆಸ್ತಿ ತೆಗೆದುಕೊಂಡಿದ್ದರ ಸಂಬಂಧ ಬಿ.ಇ.ಓ ಕಚೇರಿಯಲ್ಲಿ ದಾಖಲೆ ಇರುತ್ತವೆ. ಅದೇ ರೀತಿ ಸರ್ಕಾರದಿಂದ ನಮ್ಮ ಶಾಲೆ ಕಟ್ಟಲು ಜಾಗ ಕೊಟ್ಟಾಗ ಅದಕ್ಕೆ ಸಂಬಂಧಪಟ್ಟ ಹಾಗೆ ದಾಖಲೆ ಬಿ.ಇ.ಓ ಕಚೇರಿಯಲ್ಲಿ ಇರುತ್ತವೆ. ಜಮೀನು ಮಂಜೂರು ಮಾಡಲು ಕೇಳಿ ಬಿ.ಇ.ಓ ಕಚೇರಿಯಿಂದ ಸರ್ಕಾರಕ್ಕೆ ಬರೆದ ಪತ್ರ ನಾನು ಈ ಕೇಸಲ್ಲಿ ಹಾಜರು ಮಾಡಿಲ್ಲ. ಸಾಕ್ಷಿ ಹೇಳುತ್ತಾಳೆ ಶಾಲೆ ಕಟ್ಟಲು ಸರ್ಕಾರದವರೇ 1953-54 ರಲ್ಲಿ

ಮಂಜೂರು ಮಾಡಿದ್ದಾರೆ. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131/1 ರಲ್ಲಿ ಜಮೀನು ಮಂಜೂರು ಮಾಡಿಕೊಡಿ ಅಂತ ನಮ್ಮ ಬಿ.ಇ.ಓ ಕಚೇರಿಯಿಂದ ಸರ್ಕಾರಕ್ಕೆ ಪತ್ರ ಬರೆದಿರುವುದಿಲ್ಲ. ರುದ್ರಪ್ಪ ಬಿನ್ ಮಂಗಯ್ಯ ಅನ್ನುವವರು ಬಹಳ ವರ್ಷದ ಹಿಂದೆ ಕೆಲವು ಕೊಠಡಿ ಕಟ್ಟಿ ಕೊಟ್ಟಿದ್ದರು. ಮೊಟ್ಟ ಮೊದಲ ಬಾರಿಗೆ ನಮ್ಮ ಶಾಲೆ ಹೆಸರಿನಲ್ಲಿ ಪಂಚಾಯಿತಿ ದಾಖಲೆಯಲ್ಲಿ 1996-97 ರಲ್ಲಿ ಖಾತೆ ದಾಖಲೆ ಆಗಿದೆ. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131/1 ಇದರಲ್ಲಿ ಶಾಲೆ ಮುಖ್ಯೋಪಾದ್ಯಾಯರ ಹೆಸರು ಬಂದಿರುವುದಿಲ್ಲ. ಆದರೆ ಪಂಚಾಯಿತಿ ದಾಖಲೆಗಳಲ್ಲಿ ನಮೂದು ಆಗಿದೆ. 1996-97 ಕ್ಕಿಂತ ಪೂರ್ವದಲ್ಲಿ ಸರ್ವೆ ನಂ.131/1 ಅಂದರೆ ಶಾಲೆಯ ವಿಸ್ತೀರ್ಣದ ದಾಖಲೆ ಸರ್ಕಾರದ ಹೆಸರಿನಲ್ಲಿ ಇತ್ತು. 1996-97 ಕ್ಕಿಂತ ಪೂರ್ವದಲ್ಲಿಯ ಕಂದಾಯ ದಾಖಲೆ ಮತ್ತು ಪಂಚಾಯಿತಿ ದಾಖಲೆಯನ್ನು ಈ ಕೇಸಲ್ಲಿ ಹಾಜರು ಮಾಡಿದ್ದೇವೆ.

5. 1995-96 ಕ್ಕಿಂತ ಪೂರ್ವದಲ್ಲಿ ಸದರಿ ಜಮೀನು ಸರ್ಕರದ ಹೆಸರಿನಲ್ಲಿ ಇತ್ತು. ಅದಕ್ಕೆ ಸಂಬಂಧಿಸಿದ ಮ್ಯೂಟೇಷನ್ ಹಾಜರು ಮಾಡಿದ್ದೇನೆ. ಆದರೆ 1995 ಕ್ಕಿಂತ ಮೊದಲಿನ ಪಂಚಾಯಿತಿ ದಾಖಲೆ ಹಾಜರು ಮಾಡಿರುವುದಿಲ್ಲ. ಎ.ಚೌಡಯ್ಯ ಇವರಿಂದ ಶಾಲೆ ಮುಖ್ಯೋಪಾದ್ಯಾಯರ ಹೆಸರಿಗೆ ಖಾತೆ ಪಹಣಿ ನೇರವಾಗಿ ಆಗಿಲ್ಲ. ಆದರೆ ಸರ್ಕಾರದ ಪರವಾಗಿ ಶಾಲೆಗೆ ಮಂಜೂರಾಗಿದೆ. ಫಲಾನುಭವಿಗಳಿಗೆ ಸರ್ಕಾರದಿಂದ ಹಕ್ಕು ಪತ್ರ ಕೊಟ್ಟಿದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131/1 ಇದರಲ್ಲಿ ಕೆಲವು ಸೈಟು ಮಾಡಿ ಸರ್ಕಾರದವರು ಕೆಲವರಿಗೆ ಆಸ್ತಿ ನಂಬರ್ , ಕ್ಷೇತ್ರ ತೋರಿಸಿ ಫಲಾನುಭವಿಗಳಿಗೆ ಹಕ್ಕು ಪತ್ರ ಕೊಟ್ಟಿದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ. ಸರ್ವೆ ನಂ.131/1 ಇದರಲ್ಲಿ ಲೇಔಟ್ ನಕಾಶೆ 1957-58 ರಲ್ಲಿ ಆಗಿರಬಹುದು. ಬಡಾವಣೆ ನಕಾಶೆ ಆಗುವ ಕಾಲಕ್ಕೆ ನಮ್ಮ ಸರ್ಕಾರಿ ಶಾಲೆ ಕಟ್ಟಡ ಅಸ್ತಿತ್ವಕ್ಕೆ ಬಂದಿತ್ತು . 1953-54 ರಲ್ಲಿ ಬಹುತೇಕ ಸರ್ಕಾರಿ ಶಾಲೆಗೆ ಸರ್ಕಾರದವರು ಜಾಗ ಕೊಟ್ಟಿದ್ದಾರೆ. ಅದಕ್ಕೆ ಸಂಬಂದಪಟ್ಟ ದಾಖಲೆಗಳು ಬೂದನೂರು ಮಂಡಲ ಪಂಚಾಯಿತಿಯಲ್ಲಿ ಇದ್ದವು. ಅವು ಸುಟ್ಟು ಹೋಗಿವೆ. ನಾನು ಹೇಳುವ ಹಾಗೆ 1953-54 ಅಥವಾ ಅದಕ್ಕಿಂತ ಪೂರ್ವದಲ್ಲಿ ಸರ್ವೆ ನಂ.131/1 ರಲ್ಲಿ ಸರ್ಕಾರದವರು ಉಮ್ಮಡಹಳ್ಳಿ ಸರ್ಕಾರಿ ಶಾಲೆ ಕಟ್ಟಲು ಜಾಗ ಕೊಟ್ಟಿಲ್ಲ ಎನ್ನುವುದು ಸುಳ್ಳು. ನಾನು ಹೇಳುವಂತ 190 x 160 ಅಡಿ ಜಾಗವನ್ನು ಸರ್ಕಾರದವರು ಶಾಲೆ ಕಟ್ಟಡ ಕಟ್ಟಲು ಕೊಟ್ಟಿಲ್ಲ ಎನ್ನುವುದು ಸುಳ್ಳು. ಪೂರ್ವಕ್ಕೆ : ಕಾಲುವೆ ಅಥವಾ ದೇವಸ್ಥಾನ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಎಂ.ಸಿ.ರಸ್ತೆ ಹಾಗೂ ದಕ್ಷಿಣಕ್ಕೆ : ರಸ್ತೆ ಇರುವಂತ 190 x 160 ಅಡಿ ಜಾಗವನ್ನು ಸರ್ಕಾರದವರು ಭೂಸ್ವಾದೀನ ಮಾಡಿಕೊಂಡಿಲ್ಲ ಎನ್ನುವುದು ಸುಳ್ಳು. ಮೇಲೆ ಹೇಳಿದ ಚೆಕ್ ಬಂದಿ ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131 ಇದರ ಭಾಗ ಆಗಿರುತ್ತದೆ ಎನ್ನುವುದು ನಿಜ. ಸರ್ವೆ ನಂ.131/1 ಕ್ಷೇತ್ರ 190 x 160 ಅಡಿ ಜಾಗ ಇದು ಮೂಲತಃ ಎ.ಚೌಡಯ್ಯ ಇವರಿಗೆ ಸೇರಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಉಮ್ಮಡಹಳ್ಳಿ ಗ್ರಾಮದ ಸರ್ವೇ ನಂ.131 ಇದು ಮೂಲತಃ ಎ.ಚೌಡಯ್ಯ ಬಿನ್ ಚೌಡೇಗೌಡ ಇವರಿಗೆ ಸೇರಿತ್ತು.

6. ಸರ್ವೆ ನಂ. 131 /1 ಕ್ಷೇತ್ರ 190 x 160 ಅಡಿ ಇದು ಮೂಲತಃ ಎ.ಚೌಡಯ್ಯ ಇವರಿಗೆ ಸೇರಿದ್ದರಿಂದ, ಆ ಜಾಗದ ಆಸ್ತಿಯಲ್ಲಿ ನಮಗೆ ಅಂದರೆ ಶಾಲೆ ಅಧಿಕಾರಿಗಳಿಗೆ ಯಾವುದೇ ಹಕ್ಕು ಇರುವುದಿಲ್ಲ ಎನ್ನುವುದು ಸುಳ್ಳು. ಸದರಿ ಜಾಗದಲ್ಲಿ ಸ್ವಾಧೀನ ಪಡಿಸಿಕೊಂಡ 1465 sq mtr ಜಾಗಕ್ಕೆ ಸಂಬಂಧಪಟ್ಟ ಪರಿಹಾರ ಎದುರುದಾರ 1 ರಿಂದ 5 ಇವರಿಗೆ ಸಂಬಂಧಿಸಿರುತ್ತದೆ ಎನ್ನುವುದು ಸುಳ್ಳು. ಸದರಿ 1465 sq mtr ಇದಕ್ಕೆ ಸಂಬಂಧಪಟ್ಟ ಪರಿಹಾರ ಎದುರುದಾರ 1 ರಿಂದ 5 ಇವರಿಗೆ ಹೋಗಬಾರದು ಅನ್ನುವ ದುರುದ್ದೇಶದಿಂದ ಬೇರೆಯವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ವಾಸ್ತವಾಂಶ ಅಂದರೆ ಈ ವಿಷಯ ಎದುರುದಾರ 56 ಬಿ.ಇ.ಒ ಇವರಿಗೆ ಗೊತ್ತಿರುತ್ತದೆ, ಹೀಗಾಗಿ ಅವರು ಕೋರ್ಟಿಗೆ ಬಂದಿಲ್ಲ ಎನ್ನುವುದು ಸುಳ್ಳು. ಉಮ್ಮಡಹಳ್ಳಿ ಗ್ರಾಮದ ಸರ್ವೆ ನಂ.131 /1 ಕ್ಷೇತ್ರ 1465 sq mtr ಇದಕ್ಕೆ ಸಂಬಂಧಪಟ್ಟ ಪರಿಹಾರ ಹಣದಲ್ಲಿ ಶಾಲೆ ಅಧಿಕಾರಿಗೆ ಮತ್ತು ಶಿಕ್ಷಣ ಇಲಾಖೆಯವರಿಗೆ ಯಾವುದೇ ರೀತಿ ಹಕ್ಕು ಇರುವುದಿಲ್ಲ ಎನ್ನುವುದು ಸುಳ್ಳು. ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಕೆಲವು ವಿಚಾರಗಳು ಸತ್ಯಕ್ಕೆ ದೂರವಾಗಿರುತ್ತವೆ ಎನ್ನುವುದು ಸುಳ್ಳು.

Sri Immanual advocate, sunil kumar advocate, Jaganath advocate submit that they have no cross examination.

Other respondents absent.

Hence cross examination of RW.8 Smt. Asha Rani K.B., Head Master by the other respondents taken as nil.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಎಸ್.ಬಿ.ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.